KABI010028162025

**ಪ್ರಧಾನ ಜಿಲ್ಲಾ , ಸತ್ರ ಮತ್ತು ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಬಳ್ಳಾರಿ.**

**ವಿಶೇಷ ಮೊಕದ್ದಮೆ ಸಂಖ್ಯೆ. 948/2025**

ಫಿರ್ಯಾದಿದಾರರು: ಸರಕಾರದ ಪರ ವಾಗಿ
ಅಬಕಾರಿ ಉಪ ನಿರೀಕ್ಷಕರು,
ಬಳ್ಳಾರಿ ವಲಯ ನಂ.2, ಬಳ್ಳಾರಿ.

**-ವಿರುದ್ಧ-**

ಆರೋಪಿತರು : ವನ್ನಪ್ಪ

-

**ದೋಷಾರೋಪಣೆ**

**ಶ್ರೀ ಸಿದ್ದಲಿಂಗ ಪ್ರಭು, ಬಿ.ಎಸ್‌ಸ್ಸಿ., ಎಲ್‌ಎಲ್.ಬಿ., ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು, ಬಳ್ಳಾರಿ** ಆದ ನಾನು ಈ ಮೂಲಕ ಆರೋಪಿತರಾದ : -

ವನ್ನಪ್ಪ, ತಂದೆಃ ಕೌಡಿಕಿ ಹಂಪಣ್ಣ,
ವಯಸ್ಸು 30 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಮನೆ ಸಂ. 68, ವಾರ್ಡ್ ನಂ.3,
ಕೊಳಗಲ್ ಗ್ರಾಮ,
ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆಯ ಕ್ರಮವೇನೆಂದರೆ,

ಆರೋಪಿಯಾದ ನೀವು ಬಳ್ಳಾರಿ ತಾಲ್ಲೂಕು, ಕೊಳಗಲ್ ಗ್ರಾಮದಲ್ಲಿರುವ ಸರ್ವೆ ನಂ. 590/23 ರ ಜಮೀನಿನ ಮಾಲೀಕರಾಗಿದ್ದು, ದಿನಾಂಕ 17/12/2021 ರಂದು ಬೆಳಿಗ್ಗೆ 08-25 ಗಂಟೆ ಸಮಯದಲ್ಲಿ ಖಚಿತ ಮಾಹಿತಿ ಬಂದ ಮೇರೆಗೆ ಬಳ್ಳಾರಿಯ ಅಬಕಾರಿ ವಲಯ ನಂ.2,

ಬಳ್ಳಾರಿಯ ಅಬಕಾರಿಯವರು ತಮ್ಮ ತಂಡದೊಂದಿಗೆ ನಿಮಗೆ ಸೇರಿದ ಸದರಿ ಜಮೀನಿಗೆ ದಾಳಿ ಮಾಡಿದಾಗ, ಜಮೀನಿನಲ್ಲಿ ಮೆಣಸಿನ ಬೆಳೆ ಬೆಳೆದಿದ್ದು, ಅದರಲ್ಲಿ 02 ಗಾಂಜಾ ಗಿಡಗಳನ್ನು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಬೆಳೆದಿರುತ್ತೀರಿ, ಅವುಗಳನ್ನು ಕಿತ್ತು ತೂಕ ಮಾಡಿದಾಗ ಅದರ ತೂಕ 0.945 ಕಿಲೋ ಗ್ರಾಂ ಇರುವುದು ಕಂಡುಬಂದಿರುತ್ತದೆ. ಆ ಮೂಲಕ ಆರೋಪಿತರಾದ ನೀವು **ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 8(b) ಸಹವಾಚಕ ಕಲಂ 20(a)(i)** ಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು,

ಮೇಲೆ ಓದಿ ಹೇಳಲಾದ ಆಪಾದನೆ ಈ ನ್ಯಾಯಾಲಯದ ಸಂಜ್ಞೆಯಲ್ಲಿದ್ದು, ಅದರ ಕುರಿತಂತೆ ನೀವು ವಿಚಾರಣೆಗೊಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**2026 ನೇ ಇಸವಿ ಜುಲೈ ಮಾಹೆಯ 24 ನೇ ತಾರೀಖಿನಂದು.**

**(ಶ್ರೀ ಸಿದ್ದಲಿಂಗ ಪ್ರಭು)**
**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ 948/2025**

**ಫಿರ್ಯಾದಿದಾರಃ** ಸರ್ಕಾರದ ಪರವಾಗಿ
ಅಬಕಾರಿ ಉಪ- ನಿರೀಕ್ಷಕರು,
ಬಳ್ಳಾರಿ ವಲಯ ನಂ.2, ಬಳ್ಳಾರಿ.

**-ವಿರುದ್ಧ -**

**ಆರೋಪಿಃ** ವನ್ನಪ್ಪ, ತಂದೆಃ ಕೌಡಿಕಿ ಹಂಪಣ್ಣ,
ವಯಸ್ಸು 30 ವರ್ಷ,
ವಾಸಃ ಕೊಳಗಲ್ ಗ್ರಾಮ,
ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ.

-

**ಆರೋಪಿಯ ಹೇಳಿಕೆ**

ಪ್ರಶ್ನೆ 1. ನಿಮಗೆ ಕನ್ನಡದಲ್ಲಿ ಓದಿ ಹೇಳಿದ ಸಂಗತಿಗಳು ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ 2. ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಗೆ ಒಳಪಡುವಿರೇ?

ಉತ್ತರಃ-

**ದೃಢೀಕರಣ**

ಮೇಲೆ ಹೇಳಿದ ಆರೋಪಣೆಯನ್ನು ನ್ಯಾಯಾಲಯವು ಆರೋಪಿತನಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಅದನ್ನು ಕೇಳಿದ ನಂತರ ಆರೋಪಿತನು ತಾನು ತಪ್ಪಿತಸ್ಥನಲ್ಲ ಎಂದು ಒಪ್ಪಿಕೊಂಡಿರುತ್ತಾನೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ .

ಸ್ಥಳ : ಬಳ್ಳಾರಿ

ದಿನಾಂಕ :24/07/2026

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**